**O.S. 433-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 05.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ R G K ವಕೀಲರಿಂದಃ**

10. ನಾನು ಧಾರವಾಡ ದಲ್ಲಿ 2012 ರಲ್ಲಿ ಬಿ ಎ ಎಂ ಎಸ್ ವ್ಯಾಸಂಗ ಮಾಡಿದ್ದೇನೆ ಅಂದರೆ ಸರಿ. 2013 ರಲ್ಲಿ ಹೌಸಮನ್ ಶಿಪ್ ಮಾಡಿದ್ದೇನೆ ಅಂದರೆ ಸರಿ. ಬಿ ಎ ಎಂ ಎಸ್ ಹಾಗೂ ಹೌಸಮನ್ ಶಿಪ್ ಗೆ ನನ್ನ ಗಂಡನ ಮನೆಯಿಂದ ಹೋಗುತ್ತಿದ್ದೆನು ಅಂದರೆ ಸರಿ. ನನ್ನ ಮಗಳ ಜನಿಸಿದ್ದು ದಿಃ 6.9.2012 ಅಂದರೆ ಸರಿ. 2016 ರಲ್ಲಿ ಕ್ಲಿನಿಕ್ ಪ್ರಾರಂಭ ಮಾಡಿದ್ದೇವೆ. ಕ್ಲಿನೀಕ್ ದಲ್ಲಿ ದಿನಕ್ಕೆ 1000 – 1500 ರೂ. ಗಳು ಆಗುತ್ತಿತ್ತು. ನಾನು ಆಸ್ತಿ ಹಿಡಿಯಲು ಹಣ ಕೊಟ್ಟ ಬಗ್ಗೆ ದಾಖಲೆ ಇಲ್ಲ. 2016 ರಲ್ಲಿ ಯಾವ ತಿಂಗಳಿನಲ್ಲಿ ಕ್ಲಿನಿಕ್ ಪ್ರಾರಂಭವಾಯಿತು ಅಂತಾ ನೆನಪಿಲ್ಲ. ರಾಯನಾಳ ದಲ್ಲಿ ಪ್ಲಾಟನ್ನು ದಿಃ 1.8.2017 ಅಂದರೆ ಸರಿ. ಸದರಿ ಪ್ಲಾಟ ಖರೀದಿ ಮಾಡಲು ಎಷ್ಟು ಹಣ ಕೊಟ್ಟಿದ್ದೇನೆಂದು ನನ್ನ ಬಳಿ ದಾಖಲೆ ಇಲ್ಲ. ನನ್ನ ಗಂಡ ದುಡಿದು ಖರೀದಿ ಮಾಡಿದ್ದಾನೆ, ನಾನು ಹಣ ಕೊಟ್ಟಿದ್ದೇನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2001 ರಿಂದ ನನ್ನ ಗಂಡ ವೈದ್ಯರಿದ್ದಾರೆ ಅಂದರೆ ಸರಿ. ನನ್ನ ಗಂಡನ ತಂದೆ ಹಾಗೂ ಅವರ ಅಣ್ಣ - ತಮ್ಮಂದಿರು ಮತ್ತು ನನ್ನ ಗಂಡ – ಅವರ ಅಣ್ಣ - ತಮ್ಮಂದಿರು ವಾಟ್ನಿ ಮಾಡಿಕೊಂಡಿದ್ದು ಗೊತ್ತಿದ್ದರೂ ಈಗ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.